## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 395 |
| ಮಾನ್ಯ ಸದಸ್ಯರ ಹೆಸರು | : | ಡಾ: ವೈ. ಎ ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 10.07.2023 |
| ಉತ್ತರಿಸುವ ಸಚಿವರು | : | ಮಾನ್ಯ ಉನ್ನತ ಶಿಕ್ಷಣ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಸರ್ಕಾರಿ ಹಾಗೂ ಅನುದಾನಿತ ಇಂಜಿನಿಯರಿಂಗ್ ಮತ್ತು ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ 10 ವರ್ಷಗಳ ಹಿಂದೆ ನೇಮಕಗೊಂಡಿರುವವರಿಗೆ ಶೈಕ್ಷಣಿಕ ವಿಧ್ಯಾರ್ಹತೆ ಹೊಂದಿದ್ದರೂ ಸಿ.ಎ.ಎಸ್ ಅಡಿಯಲ್ಲಿ (ಕೆರಿಯರ್ ಅಡ್ವಾನ್ಸ್‌ಮೆಂಟ್ ಸ್ಕೀಮ್) ಸ್ಥಾನಪನ್ನ ಬಡ್ತಿಯನ್ನು ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಬಂದಿದೆ. |
| ಆ | ಕಾಲಕಾಲಕ್ಕೆ ಸ್ಥಾನಪನ್ನ ಬಡ್ತಿಯನ್ನು ನೀಡದಿರಲು ಸರ್ಕಾರಕ್ಕಿರುವ ತೊಂದರೆಗಳೇನು;(ವಿವರ ನೀಡುವುದು) | • 2010 ಮತ್ತು 2012ರ ಎಐಸಿಟಿಇ ಅಧಿಸೂಚನೆಯಲ್ಲಿನ ಕೆಲವು ಸಮಸ್ಯೆ /ನಿಯಮಗಳಿಗೆ ದಿನಾಂಕ: 04/01/2016 ರಲ್ಲಿನ ಸ್ಪಷ್ಟೀಕರಣಗಳನ್ನು ಪ್ರಚುರಪಡಿಸಿದ್ದು, ಅದರಂತೆ ಬೋಧಕ ವರ್ಗದವರಿಗೆ ವೃತ್ತಿ ಪದೋನ್ನತಿ ನಿಯಮಾವಳಿಗಳನ್ನು ಪೂರ್ವಾನ್ವಯವಾಗಿ ಅಳವಡಿಸಿಕೊಂಡ ಸಂದರ್ಭದಲ್ಲಿ ಕೆಲವೊಂದು ಸಮಸ್ಯೆಗಳು ಉದ್ಭವಗೊಂಡ ಹಿನ್ನಲೆಯಲ್ಲಿ ಸದರಿ ವಿಷಯದ ಬಗ್ಗೆ ಸ್ಪಷ್ಟೀಕರಣ ಕೋರಿ ಎ.ಐ.ಸಿ.ಟಿ.ಇ ಯೊಂದಿಗೆ ಪತ್ರ ವ್ಯವಹರಿಸಲಾಗಿತ್ತು.<br>• ಅದರಂತೆ, ಎ.ಐ.ಸಿ.ಟಿ.ಇಯು ದಿನಾಂಕ:20.05.2020ರ ಅಧಿಸೂಚನೆಯಲ್ಲಿ ನೀಡಿರುವ "Clarifications on Certain Issues / Anomalies in 6th CPC pertaining to Qualifications, Pay Scales, Service Conditions, Career Advancement Schemes |
| ಇ | ಸದರಿ ಸ್ಥಾನಪನ್ನ ಬಡ್ತಿಯನ್ನು ಯಾವ ಕಾಲಮಿತಿಯೊಳಗೆ ನೀಡಲಾಗುವುದು.? | |

| | | |
|---|---|---|
| | | (CAS)/promotions etc. for Teachers and other Academic Staff of Technical Institutions (Degree/Diploma)" ಸ್ಪಷ್ಟೀಕರಣಗಳನ್ನು ಆಧರಿಸಿ, ಸರ್ಕಾರದ ಆದೇಶ ಸಂಖ್ಯೆ:ಇಡಿ 20 ಡಿಟಿಇ 2018, ದಿ: 08.12.2020 ಹಾಗೂ ಇಡಿ 167 ಡಿಟಿಇ 2017, ದಿ: 10.11.2020ರಲ್ಲಿ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಹಾಗೂ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿನ ಬೋಧಕ ಸಿಬ್ಬಂದಿಗಳಗೆ ಸಿ.ಎ.ಎಸ್ ಯೋಜನೆ ಆಧಾರಿತ ವೃತ್ತಿ ಪದೋನ್ನತಿ ಸೌಲಭ್ಯಗಳನ್ನು ನೀಡಲು ದಿನಾಂಕ:08.11.2012 ರಲ್ಲಿನ ನಿಯಮಗಳಲ್ಲಿ ವಿಧಿಸಿರುವ ಎ.ಪಿ.ಐ ಆಧಾರಿತ ಅಂಕಗಳ ಪರಿಗಣನೆಯಿಂದ ದಿನಾಂಕ:07.11.2015 ರವರೆಗೆ ವಿನಾಯಿತಿ ನೀಡಿ ಕೆಲವು ನಿಬಂಧನೆಗಳಿಗೆ ಒಳಪಟ್ಟು ಮಂಜೂರಾತಿ ನೀಡಲಾಗಿರುತ್ತದೆ.<br>• ಮುಂದುವರೆದು, ಎ.ಐ.ಸಿ.ಟಿ.ಇ ಯು ದಿನಾಂಕ: 02.08.2022ರ ಪತ್ರದಲ್ಲಿ ಅಲ್ಪಾವಧಿ ತರಬೇತಿ, ಪತ್ರಿಕಾ ಪ್ರಕಟಣೆ ಮತ್ತು ಇತರೆ ವಿಷಯಗಳ ಕುರಿತು ಸ್ಪಷ್ಟೀಕರಿಸಲಾದ ಪ್ರಯುಕ್ತ ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಸಕ್ತ ಅವಧಿಯಲ್ಲಿ ಕ್ರಮಕೈಗೊಳ್ಳಲಾಗುತ್ತಿದೆ.<br>• ಎ.ಐ.ಸಿ.ಟಿ.ಇಯು ಕಾಲಕಾಲಕ್ಕೆ ಹೊರಡಿಸುವ ಅಧಿಸೂಚನೆ/ನಿಯಮಾವಳಿ/ಆದೇಶ/ಸ್ಪಷ್ಟೀಕರಣಗಳನ್ನು ಅಳವಡಿಸಿಕೊಂಡು ದಿನಾಂಕ:07-11-2015ರ ಪೂರ್ವಕ್ಕೆ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ಅರ್ಹರಿರುವ 55 ಜನ ಬೋಧಕ ವರ್ಗದವರಿಗೆ ಹಾಗೂ ಇಂಜಿನಿಯರಿಂಗ್ ಕಾಲೇಜುಗಳಲ್ಲಿ ದಿನಾಂಕ 07/11/2015 ರ ಪೂರ್ವಕ್ಕೆ ಅರ್ಹರಿರುವ 154 ಜನ ಬೋಧಕ ವರ್ಗದವರಿಗೆ ಹಾಗೂ 01.03.2019 ರ ಮುಂಚಿನ ಅವಧಿಗೆ ಅರ್ಹರಿರುವ 79 ಜನ ಬೋಧಕ ವರ್ಗದವರಿಗೆ ಸಿ.ಎ.ಎಸ್ ವೃತ್ತಿ ಪದೋನ್ನತಿಯನ್ನು ನೀಡಲು ಸ್ಥಾನೀಕರಣ ಸಮಿತಿಯ ಮುಂದೆ ಮಂಡಿಸಿ ವಿಷಯ ತಜ್ಞರ ಶಿಫಾರಸ್ಸಿನ ಮೇರೆಗೆ ಆಯುಕ್ತರು,ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ಇವರು ಪ್ರಸ್ತಾವನೆ ಸಲ್ಲಿಸಿದ್ದು, ಪ್ರಸ್ತುತ ಪರಿಶೀಲನೆಯಲ್ಲಿರುತ್ತದೆ. |

**(ಸಂ: ಇಡಿ 300 ಟಿಇಸಿ 2023)**

(ಡಾ. ಎಂ.ಸಿ. ಸುಧಾಕರ್)
ಉನ್ನತ ಶಿಕ್ಷಣ ಸಚಿವರು